ಪೋಪರಿಗೂ, ಚಿತ್ರದುರ್ಗದ ಕಾರ್ಡಿನಲ್‌ರಿಗೂ ಅಧೀನರಲ್ಲ. ನಾಸ್ತಿಸಮ್ ವಿರುದ್ಧವಾದ ಇತರ ಎಲ್ಲ ಸಂಸ್ಥೆಗಳನ್ನು ತೀರ ಸಂಶಯದಿಂದ ನೋಡಲಾಗುವುದು' ಎಂದು ಆ ಲೇಖನದಲ್ಲಿಯ ಒಂದು ಉಲ್ಲೇಖ.

ಈ ಲೇಖನಕ್ಕೆ ಪ್ರತಿಕ್ರಿಯೆಯಾಗಿ ಬೇಂದ್ರೆಯವರು ಬರೆದ 'ಒಂದೇ ಕರ್ನಾಟಕ' ಕವಿತೆಯು 'ಹರ್ ಬಂಡರ್' (ಮಿಸ್ಟರ್ ಬೇಂದ್ರೆ ಇದರ ಜರ್ಮನೀಕರಣ) ಹೆಸರಿನಲ್ಲಿ ಪ್ರಕಟವಾಯಿತು.

'ನಿರೀಕ್ಷಕ' ಎನ್ನುವುದು ಬೇಂದ್ರೆಯವರ ಇನ್ನೊಂದು 'ಅಂಕಿತನಾಮ' (ಕಲ್ಪಿತನಾಮ). ಬೇಂದ್ರೆಯವರ ಬಹುತೇಕ ಗದ್ಯಬರಹಗಳು ಮತ್ತು ವ್ಯಕ್ತಿಚಿತ್ರಗಳು ಈ ಹೆಸರಿನಿಂದಲೇ ಪ್ರಕಟವಾಗಿವೆ. ಈ ಬರಹಗಳು ಪ್ರಕಟವಾದದ್ದು 'ಜಯಕರ್ನಾಟಕ' ಮತ್ತು 'ವೀರಮಾತೆ' ಮತ್ತು ಇತರ ಪತ್ರಿಕೆಗಳಲ್ಲಿ.

'ಶ್ರೀಮಾನ್ ಆಲೂರು ವೆಂಕಟರಾಯರ ಸ್ವಭಾವ ಚಿತ್ರ' (ಜಯಕರ್ನಾಟಕ, 1930) ಲೇಖನದಲ್ಲಿ 'ಕರ್ನಾಟಕದಲ್ಲಿ ಆಲೂರರವರ ಹೆಸರು ಅದ್ವಿತೀಯವಾಗಿದೆ. ಕಣ್ಣಲ್ಲಿ ತುಂಬುವ ಆಕೃತಿ ವಿಶೇಷವಾಗಲಿ, ಮನಸ್ಸಿನಲ್ಲಿ ತುಂಬುವ ಮಾತುಗಾರಿಕೆಯಾಗಲಿ ಇವರದಲ್ಲ. ರಾಜಕೀಯ ರಣಾಂಗಣದಲ್ಲಿಯೂ ಇತಿಹಾಸದ ಕ್ಷೇತ್ರದಲ್ಲಿಯೂ ಸಾಹಿತ್ಯ ಲೋಕದಲ್ಲಿಯೂ ಇವರಿಗೂ ಮಿಗಿಲಾಗಿ ಕೆಲಸ ಮಾಡುವವರಿದ್ದಾರೆ; ಕೈಕೊಂಡ ಕಾರ್ಯಕ್ಕೆ ಧನವನ್ನೂ ಕಾಲವನ್ನೂ ಇವರಿಗಿಂತ ಹೆಚ್ಚು ವೆಚ್ಚ ಮಾಡಿದವರು ಇಲ್ಲವೆಂದಲ್ಲ. ತಮ್ಮ ಆಚಾರದ ಬಲದಿಂದಲೂ ವಿಚಾರದ ತೇಜದಿಂದಲೂ ಇವರಿಗಿಂತಲೂ ಆದರವನ್ನುಂಟು ಮಾಡುವವರೂ, ಜಾತಿಯ ಮೂಲಕ ದೊಡ್ಡ ಮುಂದಾಳೆನಿಸಿಕೊಂಡವರೂ ಪದವಿಯ ಮೂಲಕ ಮಹಾಗೌರವಸ್ಥರೆನಿಸಿಕೊಂಡವರೂ ಉಂಟು. ಆಲೂರರವರಲ್ಲಿ ಸಂಘಟನೆಯ ಶಕ್ತಿಯಾಗಲಿ, ಚಳವಳಿಯ ವೃತ್ತಿಯಾಗಲಿ- ಯಾವುದೂ ಇಲ್ಲ. ಏಕಮುಖವಾಗಿಯೂ ಬಹುಮುಖವಾಗಿಯೂ ತಾತ್ಕಾಲಿಕ ತೀವ್ರಾವೇಶದಿಂದಲೂ, ಏಕ ನಿಷ್ಠೆಯಿಂದಲೂ, ಅನನ್ಯ ಬುದ್ಧಿಯಿಂದಲೂ, ಸತತ ಅನುಸಂಧಾನದಿಂದಲೂ ಕರ್ನಾಟಕದ ಸಲುವಾಗಿ ವಿಚಾರ ಮಾಡುವವರು ತದನುಸಾರವಾಗಿಯೆ ಆಚರಿಸಲು ಪ್ರಯತ್ನಿಸುವವರೂ ಹಿರಿಯರಾದ ಕನ್ನಡಿಗರಲ್ಲಿ ಇವರೊಬ್ಬರೆ! ಅದೇ ಇವರ ತಪಸ್ಸು, ಇವರ ಅದ್ವಿತೀಯವಾದ ಹೆಸರು ಅದರ ಫಲವು'.

ಆಲೂರ ಎಂದರೆ ಯಾರು ಮತ್ತು ಅವರ ಶಕ್ತಿ ಯಾವುದು ಎಂದು ವಿವರಿಸುವುದಕ್ಕೆ ಅವರ ಹಿಡಿದ ದಾರಿ ಸೋಜಿಗ ಉಂಟು ಮಾಡುತ್ತದೆ. ಮೇಲ್ನೋಟಕ್ಕೆ ಋಣಾತ್ಮಕ ನೋಟಕ್ರಮ ಅನ್ನಿಸಿದರೂ ಅಲ್ಲ, ಇಲ್ಲ ಎಂದು ಹೇಳುತ್ತಲೇ ಕೊನೆಗೊಮ್ಮೆ ಅಚ್ಚರಿ ಮೂಡಿಸುವ ಶೈಲಿಯನ್ನು ಬೇಂದ್ರೆ ಅಳವಡಿಸಿ ಕೊಂಡಿದ್ದರು. ಆಲೂರ ಅವರನ್ನು ಕುರಿತ ಲೇಖನದ ಹಾಗೆಯೇ ಬೇಂದ್ರೆಯವರ (ನಿರೀಕ್ಷಕ) ಉಳಿದ ವ್ಯಕ್ತಿಚಿತ್ರಗಳೂ ಇವೆ ಎಂದು ಭಾವಿಸಬೇಕಿಲ್ಲ.

ಹರ್ಡೇಕರ ಮಂಜಪ್ಪನವರು (ಚರಿತ್ರಾವಲೋಕನ) (ಜಯಕರ್ನಾಟಕ, 1929) ಲೇಖನದಲ್ಲಿ 'ಶ್ರೀಮಂಜಪ್ಪನವರ ಸಮಾಗಮದಿಂದ ಪ್ರವರ್ತಕ

